# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 79/2021

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀ ರಘುವರನ್ | ಪ್ರಮಾಣ ಮಾಡಿಸಿದ ದಿನಾಂಕಃ | | |
| ತಂದೆ/ಗಂಡನ ಹೆಸರು | ಃ | ಶ್ರೀ ವೇಣುಪಿಳ್ಳೈ | 09.12.2024 | | |
| ವಯಸ್ಸು | ಃ | 60 ವರ್ಷ | | | |
| ವೃತ್ತಿ | ಃ | ನಿವೃತ್ತ ಡೆಪ್ಯೂಟಿ ಮ್ಯಾನೇಜರ್ (ಸೆಕ್ಯೂರಿಟಿ), ಆರ್.ಬಿ.ಐ, ಮೈಸೂರು | ಪ್ರಾ.ಸಾ. | ಃ | 02 |
| ವಾಸಸ್ಥಳ | ಃ | ಕನ್ಯಾಕುಮಾರಿ | ಚಾ.ಸಾ. | ಃ | 02 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು ಜನವರಿ *2019* ರಿಂದ ಮೇ *2024* ರವರೆಗೆ ಮೈಸೂರಿನ ಆರ್.ಬಿ.ಐ ನೋಟು ಮುದ್ರಣದಲ್ಲಿ ಡೆಪ್ಯೂಟಿ ಮ್ಯಾನೇಜರ್ ಸೆಕ್ಯೂರಿಟಿ ಆಗಿ ಕೆಲಸ ಮಾಡಿದ್ದೇನೆ. ಆ ಕಾಲಕ್ಕೆ ನಾನು ಆರ್.ಬಿ.ಐ ಕ್ಯಾಂಪಸ್ ನ ಒಳಗೆ ರೌಂಡ್ಸ್ ಗೆ ಹೊಗುತ್ತಿದ್ದೆ ಆ ಕ್ಯಾಂಪಸ್ ಅಂದಾಜು *400* ಎಕರೆ ಅಷ್ಟು ವಿಸ್ತೀರ್ಣದ್ದು ಇದೆ. ದಿಃ*12.01.2021* ರಂದು ನಾನು, ಅಜಿತ್ ಕುಮಾರ್ ಮತ್ತು ಕಮಲಾ ಪ್ರಸಾದ್ ಇವರೊಂದಿಗೆ ರೌಂಡ್ಸ್ ಗೆ ಹೋಗಿದ್ದಾಗ ಅಲ್ಲಿ *2-3* ಶ್ರೀಗಂಧದ ಮರಗಳನ್ನು ಕಡಿದಿದ್ದು ಕಂಡುಬಂದಿತ್ತು. ಆಗ ಟೌನ್ ಶಿಫ್ಟ್ ಸೆಕ್ಯೂರಿಟಿ ಇವರಿಗೆ ಹೆಚ್ಚಿನ ನಿಘಾ ವಹಿಸುವಂತೆ ತಿಳಿಸಿದ್ದೆವು. ದಿಃ*13.01.2021* ರಂದು ರಾತ್ರಿ *10.30-11* ಗಂಟೆಗೆ ನನಗೆ ಕಂಟ್ರೋಲ್ ರೂಮ್ ನ ಸಿಬ್ಬಂದಿ ಕರೆ ಮಾಡಿ ಇಬ್ಬರು ಸಂಶಯಾಸ್ಪದ ವ್ಯಕ್ತಿಗಳು ರಿಂಗ್ ರೋಡ್ ನ ಬಳಿ ಇರುವ ಕ್ಯಾಂಪಸ್ ಒಳಗಡೆ ಇರುವುದರ ಬಗ್ಗೆ ಮಾಹಿತಿ ನೀಡಿದ್ದರು. ಆ ಕಾಲಕ್ಕೆ ಸೆಕ್ಯೂರಿಟಿ ಸಿಬ್ಬಂದಿಗಳು

ಅವರನ್ನು ಹಿಡಿಯಲು ಪ್ರಯತ್ನ ಮಾಡಿದಾಗ ಅವರು ಕ್ಯಾಂಪಸ್ ನ ಒಳಗಡೆ ಓಡಿ ಹೋಗಿದ್ದಾಗಿ ಹೇಳಿದ್ದರು. ಆಗ ನಮ್ಮ ಕ್ಯಾಂಪಸ್ ನ ಎಲ್ಲಾ ಸೆಕ್ಯೂರಿಟಿ ಸಿಬ್ಬಂದಿ ಮತ್ತು ***CISF*** ಸಿಬ್ಬಂದಿಗಳಿಗೆ ಅಲರ್ಟ್ ಆಗಿ ಇರುವಂತೆ ಹೇಳಿದ್ದೆವು ಮತ್ತು ಕ್ಯಾಂಪಸ್ ಒಳಗಡೆ ಅವರನ್ನು ಹುಡುಕಲು ಪ್ರಯತ್ನ ಮಾಡಿದ್ದೆವು ಆದರೆ ಜಾಸ್ತಿ ಮರ ಇದ್ದುದರಿಂದ ಅರಣ್ಯದ ಒಳಗೆ ಹೊಗಲು ಆಗಿರಲಿಲ್ಲ. ಆಗ ಆ ವ್ಯಕ್ತಿಗಳು ಅರಣ್ಯದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಅಂದರೆ ***industrial township*** ಬದಿಗೆ ಹೋಗಿದ್ದರು ಆಗ ಅವರನ್ನು ನೋಡಿದ ಗಾರ್ಡ್ ಗಳು ನಮಗೆ ಮಾಹಿತಿ ಕೊಟ್ಟಾಗ ನಾವು ಆ ಸ್ಥಳಕ್ಕೆ ಹೆಚ್ಚಿನ ಸಿಬ್ಬಂದಿಗಳನ್ನು ನೇಮಿಸಿದ್ದೆವು ಮತ್ತು ಬೆಳಗಿನ ವರೆಗೆ ಅಲ್ಲಿಯೇ ಕಾಯಿದ್ದೆವು. ಬೆಳಗ್ಗೆ ನಾವು ***micro phone*** ನಲ್ಲಿ ಒಳಗಡೆ ಇದ್ದವರು ಹೊರಗಡೆ ಬನ್ನಿ ಎಂದು ಇಲ್ಲವಾದಲ್ಲಿ ***fire*** ಮಾಡುತ್ತೇವೆ ಎಂದು ***announce*** ಮಾಡಿದ್ದೆವು ಆಗ ಇಬ್ಬರು ವ್ಯಕ್ತಿಗಳು ಹೊರಗಡೆ ಬಂದಿದ್ದರು. ಆಗ ನಾವು ಪೊಲೀಸರಿಗೆ ಮಾಹಿತಿ ಕೊಟ್ಟಿದ್ದೆವು. ಆಗ ಪೊಲೀಸರು ಅಲ್ಲಿಗೆ ಬಂದಿದ್ದರು ಪೊಲೀಸರು ಬಂದ ಬಳಿಕ ಅರಣ್ಯದಲ್ಲಿ ಬೇರೆ ವ್ಯಕ್ತಿಗಳು ಇದ್ದ ಬಗ್ಗೆ ತಪಾಸಣೆ ಮಾಡಿದ್ದೆವು ಆದರೆ ಬೇರೆ ಯಾರು ಇರಲಿಲ್ಲ. ಆ ಕಾಲಕ್ಕೆ ಆ ಇಬ್ಬರು ವ್ಯಕ್ತಿಗಳನ್ನು ವಿಚಾರಿಸಿದಾಗ ಅವರ ಹೆಸರು ರಘು ಮತ್ತು ಮಂಜುನಾಥ ಎಂದು ಹೇಳಿದ್ದರು ಮತ್ತು ತಾವು ಗಂಧದ ಮರಗಳನ್ನು ಕತ್ತರಿಸಲು ಬಂದಿದ್ದಾಗಿ ಹೇಳಿದ್ದರು. ನಂತರ ಚಾ.ಸಾ–*1* ಅಜಿತ್ ಕುಮಾರ್ ಕರ್ಣ್ ಇವರು ಪೊಲೀಸರಿಗೆ ದೂರು ಕೊಟ್ಟಿದ್ದರು. ನಂತರ ಪೊಲೀಸರು ನಮ್ಮ ಕ್ಯಾಂಪಸ್ ಗೆ ಬಂದು ಆ ಸ್ಥಳದಲ್ಲಿದ್ದ ಬಟ್ಟೆ, ಟಾರ್ಚ್ ಲೈಟ್, ಸ್ಕ್ರೂ ಡ್ರೈವರ್ ಗಳನ್ನು ವಶಕ್ಕೆ ಪಡೆದಿದ್ದರು. ಆ ವಸ್ತುಗಳನ್ನು ಆ ವ್ಯಕ್ತಿಗಳು ಉಪಯೋಗ ಮಾಡಿದ್ದಾಗಿ ಹೇಳಿದ್ದರು. ಆ ಕಾಲಕ್ಕೆ ವಶಕ್ಕೆ ಪಡೆದಿದ್ದ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ನಮ್ಮ ಕ್ಯಾಂಪಸ್ ನಲ್ಲಿದ್ದ ವ್ಯಕ್ತಿಗಳನ್ನು

ನೋಡಿದರೆ ಗುರುತಿಸುತ್ತೇನೆ. ಕೋರ್ಟ್ ಮುಂದೆ ಇರುವ *2* ನೇ ಆರೋಪಿತ ಮಂಜುನಾಥ ಮತ್ತು ಇನ್ನೊಬ್ಬ ವ್ಯಕ್ತಿ ಆ ದಿನ ನಮ್ಮ ಕ್ಯಾಂಪಸ್ ನಲ್ಲಿದ್ದ ವ್ಯಕ್ತಿಗಳು ಇರುತ್ತಾರೆ. ಈಗ ನಾನು ನೋಡುತ್ತಿರುವ ನಿ.ಪಿ-3 ರಿಂದ 16 ಪೊಟೋಗಳಲ್ಲಿ ಕಾಣುವ ಇನ್ನೊಬ್ಬ ವ್ಯಕ್ತಿ ಆ ದಿನ ನಮ್ಮ ಕ್ಯಾಂಪಸ್ ನಲ್ಲಿದ್ದ ಒಂದನೇ ಆರೋಪಿ ರಘು ಇರುತ್ತಾನೆ. ತನಿಖೆ ವೇಳೆಯಲ್ಲಿ ಪೊಲೀಸರು ನನ್ನಿಂದ ಆ ದಿನ ರಾತ್ರಿ ಕರ್ತವ್ಯಕ್ಕೆ ನೇಮಿಸಿದ ಸಿಬ್ಬಂದಿಗಳ ಕುರಿತು ದೃಢೀಕೃತ ದಾಖಲಾತಿ ಮತ್ತು ಆ ಸ್ಥಳ ನಿಷೇಧಿತ ಪ್ರದೇಶ ಎಂದು ಗುರುತಿಸಿರುವ ದಾಖಲಾತಿ ಪತ್ರ, ದಿಃ*08.01.2021* ಮತ್ತು *13.01.2021* ರ ಸಿಸಿ ಟಿವಿ ಪುಟೇಜ್ ಗಳನ್ನು ಪೆನ್ ಡ್ರೈವ್ ನಲ್ಲಿ ಪಡೆದುಕೊಂಡಿದ್ದರು. ಈಗ ನಾನು ನೋಡುತ್ತಿರುವ ದಾಖಲೆಗಳು ನಿಷೇಧಿತ ಪ್ರದೇಶ ಎಂದು ಗುರುತಿಸಿದ್ದ ***Notification*** ಪ್ರತಿ ಮತ್ತು ದಿನ ರಾತ್ರಿ ಕರ್ತವ್ಯಕ್ಕೆ ನೇಮಿಸಿದ ಸಿಬ್ಬಂದಿಗಳ ಕುರಿತು ದೃಢೀಕೃತ ದಾಖಲಾತಿ ಇರುತ್ತವೆ. ಸದರಿ ದಾಖಲೆಗಳನ್ನು ನಿ.ಪಿ-*17* ಮತ್ತು *18* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಎರಡು ಪೆನ್ ಡ್ರೈವ್ ಗಳು ಆ ದಿನ ಸಿಸಿ ಟಿವಿ ಪುಟೇಜ್ ಸಂಗ್ರಹಿಸಿದ್ದ ಪೆನ್ ಡ್ರೈವ್ ಗಳು ಇವೆ. ಸದರಿ ಪೆನ್ ಡ್ರೈವ್ ಗಳನ್ನು ನಿ.ಪಿ-*19* ಮತ್ತು *20* ಎಂದು ಗುರುತಿಸಿದೆ. ಈಗ ನನಗೆ ಆ ಪೆನ್ ಡ್ರೈವ್ ಗಳ ದೃಶ್ಯಗಳನ್ನು ತೋರಿಸಿದ್ದು ಅವುಗಳೇ ಪೊಲೀಸರು ಸಂಗ್ರಹಿಸಿದ್ದ ಸಿಸಿ ಟಿವಿ ಪುಟೇಜ್ ಗಳು ಇವೆ.

**ಈ ವೇಳೆಗೆ ಶ್ರೀಗಂಧದ ಕಟ್ಟಿಗೆಗಳನ್ನು ಈ ದಿನ ಕೋರ್ಟ್ ಮುಂದೆ ಹಾಜರುಪಡಿಸದೇ ಇರುವ ಕಾರಣ ಸಾಕ್ಷಿದಾರರ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು